

> ಮಹಿಳೆ ಎಲ್ಲದರಲ್ಲೂ ಮುಂದೆ ಇದ್ದಾಳೆ. ಈಗ 'ಮೇಲ್ ಡಾಮಿನೇಟೆಡ್ ಸೊಸೈಟಿ' ಅಂತ ಇಲ್ಲವೇ ಇಲ್ಲ.

ಆಕ್ಟಿವಿಟೀಸ್ ಇಷ್ಟಪಟ್ಟೆ. ಬೆಂಗಳೂರಿನ ಮಲ್ಲೇಶ್ವರಂನ ಗರ್ಲ್ಸ್ ಸ್ಕೂಲ್‌ನಲ್ಲಿ ಓದ್ತಾ ಇರುವಾಗಲೇ ನಾನು ಡ್ಯಾನ್ಸ್ ಮಾಡೋದಕ್ಕೆ ಸ್ಟೇಜ್ ಹತ್ತಿದ್ದೆ. ಕರಾಟೆ, ಬಾಸ್ಕೆಟ್‌ಬಾಲ್‌ನಲ್ಲೂ ಆಸಕ್ತಿ ಇತ್ತು. ಹೀಗೆ ಎಲ್ಲದಕ್ಕೂ ನನಗೆ ಸ್ವಾತಂತ್ರ್ಯ ಇತ್ತು. ಯಾವುದೇ ಕೊರತೆ ಮಾಡಿಲ್ಲ. ನೀನು ಎಂಜಿನಿಯರೇ ಆಗ್ಬೇಕು, ಡಾಕ್ಟರ್ ಆಗ್ಬೇಕು ಅಂತ ಮನೆಯಲ್ಲಿ ಯಾರೂ ಹೇಳಲೇ ಇಲ್ಲ. ಚಿಕ್ಕವಳಿದ್ದಾಗಿನಿಂದಲೇ ಎಲ್ಲ ಸ್ವಾತಂತ್ರ್ಯ ಪಡೆದುಕೊಂಡೇ ಬೆಳೆದವಳು ನಾನು.

ನಾನು ಕಾನ್ವೆಂಟ್‌ನಲ್ಲಿ ಓದ್ತಾ ಇರುವಾಗಲೂ ಅಪ್ಪ ಅಮ್ಮ, ಟೀಚರ್ಸ್ ತುಂಬ ಪ್ರೋತ್ಸಾಹ ಕೊಡ್ತಿದ್ದರು. ಮುಂದೆ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಓದ್ತಾ ಇರುವಾಗಲೂ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸ್ತಿದ್ದೆ. ಕೆಲವು ಸಲ ಮುಂಬೈ, ಪಾಂಡಿಚೇರಿಗಳಲ್ಲಿ ಕಾಂಪಿಟೀಷನ್ಸ್ ಇರ್ತಾ ಇತ್ತು. ಅಲ್ಲೆಲ್ಲ ಹೋಗಿ ಭಾಗವಹಿಸ್ತಿದ್ದೆ. ಏನು ಮಾಡಿದ್ರೂ ಚೆನ್ನಾಗಿ ಮಾಡ್ಬೇಕು ಅಂತಲೇ ಹೇಳಿಕೊಡ್ತಾ ಇದ್ರು. ಮುಂದೆ ಟೀವಿ ಸೀರಿಯಲ್‌ನಲ್ಲಿ ಅವಕಾಶ ಸಿಕ್ತು. ಆಗ ನಂಗೆ ಈ ಕ್ಷೇತ್ರದಲ್ಲಿ ಯಾರನ್ನೂ ಗೊತ್ತಿರಲಿಲ್ಲ. 'ಗಾಡ್‌ಫಾದರ್' ಕೂಡ ಇರಲಿಲ್ಲ. ಸೀರಿಯಲ್ ಮಾಡುವಾಗ ಕಾಲೇಜಿನಲ್ಲೇ ಇದ್ದೆ. ಆಗಲೇ ಸಂಪಾದನೆ ಮಾಡೋದಕ್ಕೂ ಶುರು ಮಾಡಿದೆ. ಆರ್ಥಿಕ ಗಳಿಕೆ ಹೆಣ್ಣಿಗೆ ಕಾನ್ಫಿಡೆನ್ಸ್ ತುಂಬುತ್ತಾ ಹೋಗುತ್ತೆ.

ನಾನು ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟಾಗ ದೈಹಿಕವಾಗಿ ನೋಡೋದಕ್ಕೆ ತುಂಬ ಸಣ್ಣ ಇದ್ದೆ. ಯಾವುದೋ ಒಂದು ಸಿನಿಮಾದಲ್ಲಿ ನನ್ನನ್ನು ಸಣ್ಣ ಇದ್ದೀನಿ ಅನ್ನೋ ಕಾರಣಕ್ಕೆ ರಿಜೆಕ್ಟ್ ಮಾಡಿದ್ರು. ಆದರೆ ನನ್ನ ತಂದೆ ತಾಯಿ ನನ್ನಲ್ಲಿ ಧೈರ್ಯ ತುಂಬಿ 'ನಿನ್ನಲ್ಲಿ ಟ್ಯಾಲೆಂಟ್ ಇದೆ, ಟ್ರೈ ಮಾಡು' ಅಂತಿದ್ರು. ಪಾಸಿಟಿವ್ ಥಿಂಕಿಂಗ್ ಶುರು ಮಾಡ್ದೆ. ಅಲ್ಲಿಂದ ನನ್ನ ರಿಯಲ್ ಕೆರಿಯರ್ ಶುರು ಆಯ್ತು. ನನಗೆ ಎಲ್ಲ ರೀತಿಯ ಸ್ವಾತಂತ್ರ್ಯ ಇತ್ತು. ಇದನ್ನು ನಾವು ಹೇಗೆ ಬಳಸಿಕೊಳ್ತೀವೋ ಹಾಗೆ ಇರುತ್ತೆ. ಸ್ವಾತಂತ್ರ್ಯವನ್ನು ಯಾವತ್ತೂ ದುರುಪಯೋಗ ಮಾಡಿಕೊಳ್ಳಲಿಲ್ಲ. ನಾನು ನಟಿಸಿದ ಸಿನಿಮಾ ಸಕ್ಸಸ್ ಆಯ್ತು. ಸ್ವಾತಂತ್ರ್ಯ ಸಿಕ್ಕಿದ್ದರಿಂದ ನನಗಿಷ್ಟವಾದ ಕ್ಷೇತ್ರದಲ್ಲಿ ಮುಂದೆ ಬರುವಂತಾಯಿತು.

ಎಲ್ಲೇ ಶೂಟಿಂಗ್ ಇರಲಿ, ನನ್ನ ತಾಯಿ ಜತೆಗೆ ಬರ್ತಾರೆ. ಅದು ನನಗೆ ಸ್ವಾತಂತ್ರ್ಯ ಇಲ್ಲ ಅಂತಲ್ಲ, ಸೆಕ್ಯುರಿಟಿಗೆ ಅಂತಲೂ ಅಲ್ಲ, ನನಗೆ ಹೋಮ್ಲಿ ಫೀಲ್ ಆಗ್ಲಿ ಅಂತ ಅಷ್ಟೆ. ಕೆಲವರು ಹೇಳ್ತಾರೆ ಮದುವೆ ಆದ್ಮೇಲೆ ಹೆಣ್ಣು ಮಕ್ಕಳ ಸ್ವಾತಂತ್ರ್ಯ ಹೊರಟು ಹೋಗುತ್ತೆ ಅಂತ. ಈಗ ನಾನು ಇನ್ನೊಂದು ಸಿನಿಮಾದಲ್ಲಿ ನಟಿಸಲು ಸಹಿ ಹಾಕಿದ್ದೇನೆ. ಆಗ ಕೆಲವರು 'ಯು ಕಮ್‌ಬ್ಯಾಕ್ ಟು ದ ಇಂಡಸ್ಟ್ರಿ' ಅಂದ್ರು. ಅದು ಹೇಗೆ? ಮದುವೆ ಆದ ಕೂಡ್ಲೇ ನನಗೆ ನನ್ನ ಫ್ರೀಡಂ ಕಟ್ ಆಯ್ತು ಅಂತ ಅನಿಸಲೇ ಇಲ್ಲ. ಮದುವೆ ಆದ ಮೇಲೆ ಮನೆಯಲ್ಲಿ ಕೂತ್ಕೋಬೇಕು, ಅಡುಗೆ ಮಾಡಬೇಕು, ಗಂಡನನ್ನು ನೋಡ್ಕೋಬೇಕು ಎಂಬ ನಿಯಮ ಎಲ್ಲಿದೆ? ಹಾಗಾದರೆ ಗಂಡಸರು ಮದುವೆ ಆದ ಮೇಲೆ ಕೆಲಸಕ್ಕೆ ಹೋದ್ರೆ 'ಕಮ್ ಬ್ಯಾಕ್' ಯಾಕೆ ಆಗಲ್ಲ? ಈ ಭೇದ ಭಾವ ಏಕೆ ಮಾಡಬೇಕು? ಇದನ್ನು ನನ್ನ ಗಂಡ ಯಶ್ ಕೂಡ ಕೇಳ್ತಾರೆ. ಮದುವೆ ನಂತ್ರ ಯಶ್ ಕೂಡ ಹೊಸ ಸಿನಿಮಾ ಮಾಡ್ತಾ ಇದ್ದಾರೆ. ಅವರನ್ನು ಪತ್ರಿಕೆಯವರು 'ಕಮ್ ಬ್ಯಾಕ್' ಅಂತ ಏಕೆ ಬರೆಯಲ್ಲ? ನಂಗೆ ಮಾತ್ರ ಯಾಕೆ ಈ ಪ್ರಶ್ನೆ?

ನನಗೆ ಸ್ವಾತಂತ್ರ್ಯ ಸಿಕ್ಕಿದೆ, ಅವಕಾಶ ಸಿಕ್ಕಿದೆ. ನಾನು ಬಳಸಿಕೊಂಡಿದ್ದೇನೆ. ಮದುವೆ ಆದ ಮೇಲೆ ನಾನು, ಹೀರೋ ಇಲ್ಲದ ಸಿನಿಮಾ, ಹಾರರ್, ಸಾಮಾಜಿಕ ಸಂದೇಶದ ಸಿನಿಮಾಗಳನ್ನು ಮಾಡಬಹುದು. ಆದರೆ ನಾನು ಹಾಗೆ ಮಾಡಲ್ಲ. ಯಾಕೆ ನಮಗೆ ಫ್ರೀಡಂ ಇಲ್ವಾ? ಅದಕ್ಕಾಗಿಯೇ ನಾನು ಸಾಮಾಜಿಕ, ಕೌಟುಂಬಿಕ ಚಿತ್ರಕ್ಕೇ ಆದ್ಯತೆ ನೀಡ್ತೇನೆ. 'ಮೊಗ್ಗಿನ ಮನಸು' ಸಿನಿಮಾದಲ್ಲಿ ನಂಗೆ ಒಳ್ಳೆಯ ಹೆಸರು ಬಂದಿದೆ. ಈಗ ತಮಿಳು ಇಂಡಸ್ಟ್ರಿಯ ಒಬ್ಬರು ಸಿನಿಮಾ ಮಾಡ್ತಿದ್ದಾರೆ. ನಾನು ಅದ್ರಲ್ಲಿ ನಟಿಸ್ತಾ ಇದ್ದೀನಿ. ಈ ನಿರ್ಧಾರ ನನ್ನ ಕೈಯಲ್ಲೇ ಇದೆ. ಅಷ್ಟು ಸ್ವಾತಂತ್ರ್ಯ ನನಗಿದೆ.

ಮಹಿಳೆ ಎಲ್ಲದರಲ್ಲೂ ಮುಂದೆ ಇದ್ದಾಳೆ. ಈಗ 'ಮೇಲ್ ಡಾಮಿನೇಟೆಡ್ ಸೊಸೈಟಿ' ಅಂತ ಇಲ್ಲವೇ ಇಲ್ಲ. ಕ್ರಿಕೆಟ್‌ನಲ್ಲಿ ನಮ್ಮ ಮಹಿಳೆಯರ ಟೀಮ್ ಬಹುದೊಡ್ಡ ಸಾಧನೆ ಮಾಡಿದೆ. ಸಿನಿಮಾ, ಬಾಹ್ಯಾಕಾಶ, ಪೊಲೀಸ್ ಎಲ್ಲ ಕ್ಷೇತ್ರದಲ್ಲೂ ಮಹಿಳೆ ಅಗಾಧವಾಗಿ ಸಾಧನೆ ಮಾಡಿದ್ದಾಳೆ. ಸ್ವಾತಂತ್ರ್ಯ ಇಲ್ಲದೆ ಇಷ್ಟು ಸಾಧನೆ ಸಾಧ್ಯವಾ? ಯಾವುದೇ ಕ್ಷೇತ್ರದಲ್ಲಾಗಲಿ ಜನರಿಗೆ ಮೆರಿಟ್ ಮೇಲೆ ಕೆಲಸ ಕೊಡಬೇಕೇ ಹೊರತು 'ಜೆಂಡರ್' ಮೇಲೆ ಕೆಲಸ ಕೊಡಬಾರದು. ಮಹಿಳೆಗೂ ಶಕ್ತಿ ಇದೆ, ಸಾಮರ್ಥ್ಯ ಇದೆ, ಸಾಧನೆ ಇದೆ, ಪ್ರತಿಭೆ ಇದೆ. ಇವೆಲ್ಲ ಸೇರಿದಾಗ ಅದ್ಭುತವಾದ 'ವುಮನ್ ಪವರ್' ಹೊರಬೀಳುತ್ತೆ.

ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವ ಸುದ್ದಿ ಆಗಾಗ್ಗೆ ಬರುತ್ತಲೇ ಇದೆ. ಬೇಜಾರ್ ಆಗುತ್ತೆ. ಕೋಪಾನೂ ಬರುತ್ತದೆ. ಶಿಕ್ಷೆಯ ಪ್ರಮಾಣ ಜಾಸ್ತಿ ಮಾಡಬೇಕು. ಕಾನೂನು ಸ್ಟ್ರಿಕ್ಟ್ ಆಗಬೇಕು. ಆಗ ಮಹಿಳೆಯರ ಮೇಲಿನ ದೌರ್ಜನ್ಯ ಕಡಿಮೆ ಆಗಬಹುದು. ಮಹಿಳೆ ಎಷ್ಟು ಸ್ವತಂತ್ರಳು ಎಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ, ಕೌಟುಂಬಿಕವಾಗಿ ಎಲ್ಲ ಹಂತದಲ್ಲೂ ಆಕೆ ಸ್ವ ಇಚ್ಛೆಯಿಂದ ತೊಡಗಿಸಿಕೊಂಡು ಯಾವುದೇ ಅಡ್ಡಿ ಆತಂಕಗಳಿಲ್ಲದ ಜೀವನ ನಡೆಸಿದಾಗ ಸಂತೃಪ್ತ ಬದುಕು ಆಕೆಯದಾಗುತ್ತದೆ.